SRI N. B. SIRDESAI.—With reference to your answer to 'D' may I know whether the Government is aware of the fact that a proposal for the construction of dam across Malaprabha in Khanapur Taluk has already been made and the same has been submitted to the Centre by the State Government for according sanction ?

SRI S. B. NAGARAL.—This question pertains to the Major Irrigation. I have no information about that.

SRI N. B. SIRDESAI.—You have stated 'no such cases' while answering question (d)

SRI S. B. NAGARAL.—That applies to Minor Irrigation.

SRI N. B. SIRDESAI —May I know the total amount of allotment for the development of Western ghats in the State ?

SRI S. B. NAGARAL:—We have got Rs. 4 lakhs for minor irrigation

SRI N. B. SIRDESAI —Is it a fact that out of Rs. 2.58 lakhs sanctioned for Khanapur Taluk preference will be given to Irrigation works and road works ?

SRI S. B. NAGARAL.—Priority will be given to minor Irrigation works Rs. 4 lakhs has been allotted to Minor Irrigation schemes, and the entire amount will have to be spent for minor irrigation works.

ಚಿಕ್ಕಮಗಳೂರು ಜಿಲ್ಲೆಯಲ್ಲಿ ಇತ್ಯರ್ಥವಾಗದುಳಿದಿರುವ ಜಮೀನಿನ ದರಖಾಸ್ತು ದಾಖಲೆಗಳು

400. ಶ್ರೀ ಜಿ. ಪುಟ್ಟಸ್ವಾಮಿ (ಮೂಡಗೆರೆ).—ಅರಣ್ಯ ಮಂತ್ರಿಗಳು ಈ ವಿಷಯಗಳನ್ನು ದಯೆಯಿಟ್ಟು ತಿಳಿಸುವರೆ :—

(ಅ) ಚಿಕ್ಕಮಗಳೂರು ಜಿಲ್ಲೆಯ ಡಿ.ಎಫ್.ಓ. ಚಿಕ್ಕಮಗಳೂರು, ಕೊಪ್ಪ ಮತ್ತು ತರೀಕೆರೆ ಡಿವಿಜನ್ ಆಫೀಸ್‌ಗಳಲ್ಲಿ ಬಾಕಿ ಇರುವ ಜಮೀನು ದರಖಾಸ್ತು ರಿಕಾರ್ಡುಗಳೆಷ್ಟು ;

(ಆ) ಅವು ಯಾವ ವರ್ಷಗಳಿಂದ ಬಾಕಿ ಇವೆ ?

ಶ್ರೀ ಸಿ. ಎನ್. ಪಾಟೀಲ್ (ಅರಣ್ಯ ಮಂತ್ರಿಗಳು).—

(ಅ) 428.

(ಆ) ಬಹುಪಾಲು 1973-74 ರಿಂದ

ಶ್ರೀ ಜಿ. ಪುಟ್ಟಸ್ವಾಮಿ.—ಸ್ವಾಮಿ ತಾವು 428 ದರಖಾಸ್ತು ಅರ್ಜಿಗಳು ಬಾಕಿ ಇವೆ ಎಂದು ಹೇಳಿದ್ದೀರಿ. ಚಿಕ್ಕಮಗಳೂರು ಡಿವಿಜನ್‌ನಲ್ಲಿ ಎಷ್ಟು, ಕೊಪ್ಪ ಡಿವಿಜನ್‌ನಲ್ಲಿ ಎಷ್ಟು, ತರೀಕೆರೆ ಡಿವಿಶನ್‌ನಲ್ಲಿ ಎಷ್ಟು ಎಂದು ಹೇಳುತ್ತೀರಾ ?

†ಶ್ರೀ ಸಿ. ಎನ್. ಪಾಟೀಲ್.—ಚಿಕ್ಕಮಗಳೂರು ಡಿವಿಜನ್‌ನಲ್ಲಿ 171, ಕೊಪ್ಪ ಡಿವಿಷನ್‌ನಲ್ಲಿ 105. ಭದ್ರಾವತಿ ಡಿವಿಷನ್ ಮತ್ತು ತರೀಕೆರೆ ಡಿವಿಷನ್‌ನಲ್ಲಿ 146 ಇರುತ್ತವೆ.

ಶ್ರೀ ಜಿ. ಪುಟ್ಟಸ್ವಾಮಿ.—1974ರಿಂದ ಬಾಕಿ ಇದೆ. ಬಹುಪಾಲು ಬಾಕಿ ಇದೆ ಎಂದು ಹೇಳಿದ್ದೀರಿ. ತಮ್ಮ ಉತ್ತರದಿಂದ ತಿಳಿಯುತ್ತಿದೆ ಬಹಳ ಹಿಂದಿನಿಂದಲೂ ಬಾಕಿ ಇರತಕ್ಕ ರೆಕಾರ್ಡ್‌ಗಳು ಇವೆ ಎಂದು ಅಲ್ಲವೆ ?

ಶ್ರೀ ಸಿ. ಎನ್. ಪಾಟೀಲ್.—ಹಾಗೆ ತಿಳಿದುಕೊಳ್ಳಬಹುದು.

ಶ್ರೀ ಜಿ. ಪುಟ್ಟಸ್ವಾಮಿ.—ಎಷ್ಟೆಷ್ಟು ವರ್ಷಗಳಿಂದ ರೆಕಾರ್ಡ್ ಬಾಕಿ ಇವೆ. ಅವುಗಳ ಸಂಖ್ಯೆ ಎಷ್ಟು ?

ಶ್ರೀ ಸಿ. ಎನ್. ಪಾಟೀಲ್ —1965-66 1966-67, 1967-68 ಹಾಗೂ 1968-69 ರಿಂದ ಮೂರು ಡಿವಿಜನ್‌ನಲ್ಲೂ 59 ಕೇಸ್‌ಗಳು ಬಾಕಿ ಇವೆ.

ಶ್ರೀ ಜಿ. ಪುಟ್ಟಸ್ವಾಮಿ.—ಮಂತ್ರಿಗಳು ಪ್ರವಾಸ ಹೋದಾಗ ಚಿಕ್ಕಮಗಳೂರು ಜಿಲ್ಲೆಯಲ್ಲಿ ರೆಕಾರ್ಡ್ಸ್ ಬಾಕಿ ಇವೆ ಎಂದು ದೂರು ಕೊಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಸಿ. ಎನ್. ಪಾಟೀಲ್.—ನಾನು ಚಿಕ್ಕಮಗಳೂರು ಡಿಸ್ಟ್ರಿಕ್ಟ್‌ಕಡೆ ಪ್ರವಾಸವೇ ಹೋಗಿಲ್ಲ.

ಶ್ರೀ ಜಿ. ಪುಟ್ಟಸ್ವಾಮಿ.—ಆ ಬಗ್ಗೆ ರೆಕಾರ್ಡ್‌ಗಳು ಬಹಳ ವರ್ಷದಿಂದ ಇರುವುದರಿಂದ ಎಷ್ಟು ಕಾಲದಲ್ಲಿ ಎಷ್ಟು ಜಾಗ್ರತೆಯಾಗಿ ವಿಲೇವಾರಿ ಮಾಡುತ್ತಾರೆ ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಸಿ. ಎನ್. ಪಾಟೀಲ್.—ಕೆಲವು ಜಮೀನುಗಳನ್ನು ವಾಪಸ್ಸು ಪಡೆಯಬೇಕಾಗುತ್ತದೆ. ಅವುಗಳನ್ನು ವಿಲೇವಾರಿ ಮಾಡುವುದಕ್ಕಾಗುವುದಿಲ್ಲ. ಕೆಲವೊಂದು ರೆವಿನ್ಯೂ ಆಫೀಸರ್ಸ್ ಫಾರ್‌ಮಾಲಿಟೀಸನ್ನು ನೋಡಬೇಕಾಗಿತ್ತು ನೋಡಿಲ್ಲ ಯಾವುದೋ ಒಂದು ಜಮೀನಿನಲ್ಲಿ ಒಂದು ಹೆಕ್ಟೇರ್‌ನಲ್ಲಿ 25 ಶ್ರೀಗಂಧದ ಮರಗಳು 8 ಇಂಚು ಗರ್ಭಕ್ಕಿಂತ ಹೆಚ್ಚು ಇರುವುದರಿಂದ ಕೊಡಲಿಕ್ಕೆ ಬರುವುದಿಲ್ಲ, ಮರಗಳು ಇದ್ದರೂ ರೆವಿನ್ಯೂ ಆಫೀಸರ್ಸ್ ಪಟ್ಟ ಗ್ರಾಂಟ್ ಮಾಡಿದ್ದಾರೆ. ಎರಡನೆಯದಾಗಿ ಇದರಲ್ಲಿ ರಿಚ್ ಗ್ರೋತ್ ಇಲ್ಲ, ಮೂರನೆಯದಾಗಿ 100 ಮೀಟರ್ ಜಮೀನಿಗೆ ಪಟ್ಟ ಗ್ರಾಂಟ್ ಮಾಡುವುದಕ್ಕೆ ಬರುವುದಿಲ್ಲ. ಅಂತಹ ಕಡೆ ಜಮೀನ್ ಕೊಟ್ಟ ನನದ್ದುಗಳನ್ನು ವಾಪಸ್ಸು ತೆಗೆದುಕೊಳ್ಳುತ್ತಾರೆ.

ಚಿಕ್ಕಮಗಳೂರು ಜಿಲ್ಲೆಯಲ್ಲಿ ಹರಿಜನರು ಹಾಗೂ ಗಿರಿಜನರು ಅನಧಿಕೃತವಾಗಿ ಸಾಗುವಳಿ ಮಾಡುತ್ತಿರುವುದು.

406. ಶ್ರೀ ಜಿ. ಪುಟ್ಟಸ್ವಾಮಿ (ಪುಲಿಗೆರೆ).—ಕಂದಾಯ ಮಂತ್ರಿಗಳು ಈ ವಿಷಯವನ್ನು ದಯವಿಟ್ಟು ತಿಳಿಸುವರೇ :—

ಚಿಕ್ಕಮಗಳೂರು ಜಿಲ್ಲೆಯಲ್ಲಿ ಬಗರ್ ಹುಕುಂ ಜಮೀನು ಸಾಗುವಳಿ ಮಾಡುತ್ತಿರುವ ಹರಿಜನ ಗಿರಿಜನ ಸಂಸಾರಗಳ ಹೆಸರು ಗ್ರಾಮ, ನಂ. ನಂ., ವಿಸ್ತೀರ್ಣ ಮತ್ತು ಯಾವ ತರಹೆ ಜಮೀನು ಯಾವ ರಾಗಾಯ್ತಿನಿಂದ ಬಗರ್ ಹುಕುಂ ಸಾಗುವಳಿ ಮಾಡುತ್ತಿರುತ್ತಾರೆ ತಿಳಿಸಬೇಕು (ಗ್ರಾಮವಾರು), ಹೋಬಳಿ, ತಾಲ್ಲೂಕುವಾರು ಅಂಕಿ ಅಂಶಗಳನ್ನು ಕೊಡಬೇಕು)?

ಶ್ರೀ ಎನ್. ಹುಚ್ಚಮಾಸ್ತಿಗೌಡ (ಕಂದಾಯ ಮಂತ್ರಿಗಳು).—ತಾಲ್ಲೂಕುವಾರು ವಿವರಗಳನ್ನು ಮಾತ್ರ ಲಗತ್ತಿಸಲಾಗಿದೆ.